> ಸೆಕ್ಸ್ ಎನ್ನುವುದು ಒಂದು ರೀತಿಯಲ್ಲಿ ಆತ್ಮದ ಬದ್ಧತೆಯನ್ನು ಒಳಗೊಂಡಂತಹದ್ದು. ನಿಮಗೆ ಒಳ್ಳೆಯ ಲೈಂಗಿಕ ಅನುಭವ ದಕ್ಕಿದರೆ ನಿಮ್ಮ ಗಾಯಗಳು ಮಾಯುತ್ತವೆ. ಕಲ್ಪನಾ ಶಕ್ತಿ ಹೆಚ್ಚುತ್ತದೆ. ಅದೊಂದು ರೀತಿಯಲ್ಲಿ ಉನ್ನತೀಕರಣದ ಕ್ರಿಯೆ.

ದೇಶಗಳು ಇಂಗ್ಲಿಷಿನಿಂದ ತಮ್ಮ ಭಾಷೆಗೆ ಅನುವಾದ ಮಾಡಿಕೊಳ್ಳುತ್ತವೆ. ಹಾಗಾಗಿ, ಅನುವಾದ ನಿಖರವಾಗಿರಬೇಕು. ಉಳಿದಂತೆ ಬಹಳಷ್ಟು ದೇಶಗಳು ಜಪಾನಿ ಭಾಷೆಯಿಂದಲೇ ಅನುವಾದ ಮಾಡಿಕೊಳ್ಳುತ್ತವೆ.

◆ **ನೀವು ಕಾರ್ವರ್, ಫಿಟ್ಜ್‌ಗೆರಾಲ್ಡ್, ಇರ್ವಿಂಗ್(ಅಮೆರಿಕನ್ ಬರಹಗಾರರು)ರಂತಹ ವಾಸ್ತವವಾದಿ ಲೇಖಕರನ್ನು ಅನುವಾದಿಸಿದ್ದೀರಿ. ಇದು ಓದುಗರಾಗಿ ನಿಮ್ಮ ಅಭಿರುಚಿಯನ್ನು ಸೂಚಿಸುತ್ತದೆಯೋ ಅಥವ ಅದು ನಿಮ್ಮ ಬರವಣಿಗೆಗೆ ಸಹಕಾರಿ ಅಂತ ಸೂಚಿಸುತ್ತದೆಯೋ?**

ನಾನು ಅನುವಾದಿಸಿದವರು ಬರೆದಿರುವ ಪುಸ್ತಕಗಳಿಂದ ಒಂದಲ್ಲ ಒಂದು ವಿಷಯವನ್ನು ಕಲಿತಿದ್ದೇನೆ. ಅದು ಮುಖ್ಯ. ವಾಸ್ತವವಾದಿ ಲೇಖಕರಿಂದ ಬಹಳಷ್ಟನ್ನು ಕಲಿತಿದ್ದೇನೆ. ಅವರ ಪುಸ್ತಕಗಳನ್ನು ಅನುವಾದಿಸಬೇಕೆಂದರೆ ಬಹಳ ಸೂಕ್ಷ್ಮವಾಗಿ ಓದಬೇಕು. ಆಗಲೇ ಅವರ ರಹಸ್ಯಗಳು ಕಾಣುವುದು. ಒಂದು ವೇಳೆ ಪೋಸ್ಟ್‌ಮಾಡರ್ನ್ ಲೇಖಕರಾದ ಡಾನ್ ಡೆಲಿಲೊ, ಜಾನ್ ಬಾರ್ತ ಅಥವಾ ಥಾಮಸ್ ಪಿಂಚನ್‌ರನ್ನು ಅನುವಾದಿಸಿದ್ದರೆ ನನ್ನ ಅವರ ಹುಚ್ಚುತನದ ನಡುವೆ ತಿಕ್ಕಾಟವಾಗುತ್ತಿತ್ತು. ಅವರ ಕೃತಿಗಳನ್ನು ಮೆಚ್ಚುತ್ತೇನೆ. ಆದರೆ, ವಾಸ್ತವಾದಿ ಬರಹಗಾರರನ್ನೇ ಅನುವಾದಕ್ಕೆ ಆಯ್ಕೆ ಮಾಡಿಕೊಳ್ಳುತ್ತೇನೆ.

◆ **ಸಮಕಾಲೀನ ಜಪಾನಿ ಬರಹಗಾರರ ನಡುವೆ ನಿಮ್ಮನ್ನು ಹೆಚ್ಚು ಪಾಶ್ಚಿಮಾತ್ಯ ಎಂದೇ ಗುರುತಿಸಿಕೊಳ್ಳುವಿರಿ. ಜಪಾನಿ ಸಂಸ್ಕೃತಿಯೊಂದಿಗಿನ ನಿಮ್ಮ ಸಂಬಂಧ ಯಾವ ಬಗೆಯದು?**

ಜಪಾನಿನ ಬಗ್ಗೆ ಇಲ್ಲಿನ ಬದುಕಿನ ಬಗ್ಗೆ ಬರೆಯಲು ಇಷ್ಟಪಡುತ್ತೇನೆ. ಅದು ನನಗೆ ಮುಖ್ಯ. ಹಲವರು ನನ್ನ ಶೈಲಿ ಪಾಶ್ಚಾತ್ಯರಿಗೆ ಇಷ್ಟವಾಗುತ್ತದೆ ಎನ್ನುತ್ತಾರೆ. ಅದು ನಿಜವಿರಬಹುದು. ಆದರೆ, ನನ್ನ ಕತೆಗಳು ನನ್ನವೇ. ಅವು ಪಾಶ್ಚಾತ್ಯೀಕರಣಕ್ಕೆ ಒಳಗಾಗಿಲ್ಲ.

◆ **ನಿಮ್ಮ ಕಾದಂಬರಿಗಳು ಸಮಕಾಲೀನ ಜಪಾನಿ ನಗರ ಜೀವನದ ನಿಖರ ಚಿತ್ರಣವೇ?**

ಜನ ಮಾತನಾಡುವುದು, ಪ್ರತಿಕ್ರಿಯಿಸುವುದು, ಯೋಚಿಸುವುದು ಜಪಾನಿಯರಂತೆ. ಯಾವ ಜಪಾನಿ ಓದುಗನೂ ನನ್ನ ಕತೆಗಳು ತಮ್ಮ ಬದುಕಿಗಿಂತ ಭಿನ್ನ ಎಂದು ದೂರಿಲ್ಲ. ನಾನು ಜಪಾನಿಯರ ಬಗ್ಗೆ ಬರೆಯಲು ಯತ್ನಿಸಿದ್ದೇನೆ. ನಾವು ಹೇಗಿದ್ದೇವೆ, ಏನಾಗುತ್ತಿದೆ, ಇಲ್ಲೇಕೆ ಇದ್ದೇವೆ ಎನ್ನುವುದರ ಬಗ್ಗೆ ಬರೆಯಲು ಇಷ್ಟಪಡುತ್ತೇನೆ. ಅದೇ ನನ್ನ ಕೃತಿಗಳ ಥೀಮ್.

◆ **ನಿಮ್ಮ ಕೃತಿಗಳ ಮೇಲೆ ಜಪಾನಿ ಜಾನಪದ ಸಾಹಿತ್ಯದ ಪ್ರಭಾವವಿದೆಯೇ?**

ಬಾಲ್ಯದಲ್ಲಿ ಹಲವಾರು ಜನಪದ ಕತೆಗಳನ್ನು ಕೇಳಿದ್ದೇನೆ. 'Super–Frog Saves Tokyo' ಕತೆಯ ಸೂಪರ್ ಫ್ರಾಗ್ ಸೃಷ್ಟಿಯ ಹಿಂದೆ ಈ ಕತೆಗಳ ಪ್ರಭಾವವಿರಬಹುದು. ಅಮೆರಿಕನ್ನರು,